JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕುವೆಂಪು ಸಾಹಿತ್ಯದಲ್ಲಿ ಸ್ತ್ರೀ

**ಡಾ. ಎಚ್ ಪಿ ಗೀತಾ**

ಕನ್ನಡ ಸಹಪ್ರಾಧ್ಯಾಪಕಿ

ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

**ವಚ**ನ ಸಾಹಿತ್ಯದ ಕಾಲಘಟ್ಟವನ್ನು ಹೊರತುಪಡಿಸಿ ಉಳಿದಂತೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀದೇಹಧಾರಿತ ರಾಜಕಾರಣದ ಹಿನ್ನೆಲೆಯಲ್ಲಿ ಉಪಭೋಗದ ಸರಕಾಗಿ ಚಿತ್ರಿತಳಾಗಿದ್ದಾಳೆ. ಸ್ತ್ರೀವಾದ, ಸ್ತ್ರೀ ಸಮಾನತೆಯ ಆಶಯಗಳುಳ್ಳ ಸಾಹಿತ್ಯ ಇಪ್ಪತ್ತನೆಯ ಶತಮಾನದ ಐವತ್ತರ ದಶಕದ ತರುವಾಯ ರಚನೆಯಾಗತೊಡಗಿದೆ. ಇದಕ್ಕಿಂತ ಹಿಂದೆ ಹೆಣ್ಣು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ನಿರ್ಲಕ್ಷ್ಯಕ್ಕೆ, ಅವಹೇಳನಕ್ಕೆ, ಶೋಷಣೆಗೀಡಾಗಿದ್ದು ತನ್ನ ಅಸ್ಮಿತೆಯನ್ನು ಪ್ರಕಟಪಡಿಸುವುದಿರಲಿ, ಧೈರ್ಯವಾಗಿ ನಿಂತು ಮಾತನಾಡಲು ಸಾಧ್ಯವಾಗದೆ 'ಲಜ್ಜಾಗೌರಿ', ಕ್ಷಮಯಾಧರಿತ್ರಿಯಂತೆ, ಈಗಾಗಲೇ ಸಿದ್ಧವಾಗಿದ್ದ ಸ್ತ್ರೀಮಾದರಿಗಳೊಂದಿಗೆ ಬದುಕಬೇಕಾಗಿತ್ತು. ಸ್ವತಂತ್ರ ವ್ಯಕ್ತಿತ್ವದ ನಿರಾಕರಣೆಯಿದ್ದ ಆ ಸಂದರ್ಭದಲ್ಲಿ ತಂದೆಯ ಮಗಳಾಗಿ, ಗಂಡನ ಹೆಂಡತಿಯಾಗಿ, ಮಗನ ತಾಯಿಯಾಗಿ ಅಸ್ತಿತ್ವ ಗುರುತಿಸಿಕೊಳ್ಳಬೇಕಿತ್ತು. ಕೆಲವಡೆಯಲ್ಲಿ ತವರು ಮನೆಯ ಹೆಸರನ್ನು ನಿರಾಕರಿಸಿ ಮದುವೆಯಾದನಂತರ ತಾವೇ ಮತ್ತೊಂದು ಹೆಸರಿಟ್ಟು, ಎರಡು ಕಡೆಯಲ್ಲಿಯೂ ಅವಳನ್ನು ಅಪರಿಚಿತಳನ್ನಾಗಿಸಿ ಕೊನೆಗೆ ಹೆಸರೂ ಇಲ್ಲದೆ 'ಅದು' 'ಇದು' 'ಇವಳೇ' ಎಂದು ಸಂಭೋದಿಸಿ ಸಾಮಾಜಿಕವಾಗಿ ಹೆಣ್ಣಿನ ಸ್ಥಾನವನ್ನು ನಗಣ್ಯಕ್ಕೀಡುಮಾಡಿದ್ದರು. ಒಂದೆಡೆ ಕಾಡುತ್ತಿದ್ದ ಮೌಢ್ಯ, ಅಜ್ಞಾನ, ಅಂಧಾನುಕರಣೆ, ಮತ್ತೊಂದೆಡೆ ಪಾಶ್ಚಾತ್ಯ ಮಾದರಿಯ ಶಿಕ್ಷಣದಿಂದ ಪಡೆದ ಅರಿವು, ಹೊಸ ಆಲೋಚನಾ ಕ್ರಮದಿಂದಾಗಿ ಬದುಕನ್ನು ವಿಶ್ಲೇಷಣಾತ್ಮಕವಾಗಿ ನೋಡುತ್ತಿದ್ದ ಸಂದರ್ಭದಲ್ಲಿ ಕುವೆಂಪು ಸಾಹಿತ್ಯ ರಚನೆ ಆರಂಭಿಸಿದ್ದರು.

ಕುವೆಂಪು ಸಾಹಿತ್ಯ ರಚನೆಗೆ ತೊಡಗಿಸಿಕೊಂಡ ಸಂದರ್ಭ ವಸಾಹತೋತ್ತರ ಕಾಲಘಟ್ಟವಾಗಿತ್ತು. ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅತಿಯಾಗಿದ್ದ ಸಾಮಾಜಿಕ ಸಂಘರ್ಷಗಳು ಆಗ ಮತ್ತಷ್ಟು ಬಿರುಸಾಗಿದ್ದವು. ಹೆಣ್ಣು ಭೂಮಿಯಂತೆ ಉತ್ಪತ್ತಿಸ್ಥಾನಕ್ಕೆ ಸೀಮಿತವಾಗಿದ್ದು ದೈಹಿಕ ಮತ್ತು ಮಾನಸಿಕವಾಗಿ ನಿರಂತರ ಶೋಷಣೆಗೀಡಾದ ಪರಿಣಾಮದಿಂದ ಆಕೆಯ ಸ್ಥಾನಮಾನಗಳು ಮತ್ತಷ್ಟು ತಳಕ್ಕಿಳಿದಿತ್ತು. ಇಂಥದ್ದರ ನಡುವೆಯೂ ಸ್ತ್ರೀ ಶಿಕ್ಷಣಕ್ಕೆ ಕಾಲ ಹದವಾಗುತ್ತಿತ್ತು. ಇಂಥ ಸಾಂಸ್ಕೃತಿಕ, ಸಾಮಾಜಿಕ ಸ್ಥಿತ್ಯಂತರದ ಸಂದರ್ಭದಲ್ಲಿ ಮಲೆನಾಡಿನ ಪರಿಸರದಿಂದ ಬಂದ ಕುವೆಂಪು ತಮ್ಮ ಹಿಂದಿನ ಮತ್ತು ಸಮಕಾಲಿನ ಸಂದರ್ಭದ ಮೌಢ್ಯ, ದೌರ್ಜನ್ಯ ತಳಸಮುದಾಯದವರ ಅಸಹಾಯಕತೆ, ಸ್ವಾಭಿಮಾನ,ಬದುಕಿನ ಬಗೆಗಿನ ತುಡಿತ ಮೊದಲಾದವುಗಳನ್ನು ಮಾನವೀಯ  ನೆಲೆಯಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಆಧುನಿಕ ಶಿಕ್ಷಣದ ಫಲವಾಗಿ ವೈಚಾರಿಕತೆ, ಆತ್ಮಶ್ರೀ, ನಿರಂಕುಶಮತಿತ್ವಗಳನ್ನು ತಾವು ಪ್ರತಿಪಾದಿಸುವ ವಿಚಾರಗಳಲ್ಲಿ ತಂದಿದ್ದಾರೆ. ಅಂದಿನ ಸಮಾಜದ ನಿಯಂತ್ರಕಶಕ್ತಿಯಾಗಿದ್ದ ಪುರೋಹಿತಶಾಹಿತ್ವವನ್ನು ನೇರವಾಗಿ ಖಂಡಿಸಿ ಜೀವಪರ ಮತ್ತು ಸ್ತ್ರೀಪರ ದೃಷ್ಟಿಕೋನವನ್ನು ತಮ್ಮ ಬದುಕು ಮತ್ತು ಬರಹಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಕುವೆಂಪು ಸಾಹಿತ್ಯ ರಚನೆಯ ಸಂದರ್ಭದಲ್ಲಿ ಹೆಣ್ಣು ಅಕ್ಷರಸ್ಥಳಾಗಿದ್ದಳೆ ವಿನಃ ಸ್ವತಂತ್ರವಾಗಿ ದಿಟ್ಟ ನಿರ್ಧಾರ ತೆಗೆದುಕೊಳ್ಳುವುದಾಗಲಿ, ಆರ್ಥಿಕವಾಗಿ ಸ್ವಾವಲಂಬಿಯಾಗುವುದಾಗಲಿ ಸಾಧ್ಯವಿರಲಿಲ್ಲ.  ಕುವೆಂಪು ಸಾಹಿತ್ಯದ ಬಹುಪಾಲು ವಸ್ತು ಸ್ವಾತಂತ್ರ್ಯ ಪೂರ್ವಕ್ಕೆ ಸೇರಿದ್ದರಿಂದ ಸ್ತ್ರೀ ಸಬಲೀಕರಣದ ಕಲ್ಪನೆಯೇ ಅಸಾಧ್ಯವಾಗಿತ್ತು. ಈ ಗ್ರಹಿಕೆಯೊಂದಿಗೆ ನಾವು ಕುವೆಂಪು ಸಾಹಿತ್ಯದಲ್ಲಿ

೧) ಕುವೆಂಪು ಸಾಹಿತ್ಯದ ಸಂವೇದನೆಗಳು ದಲಿತರ ಮತ್ತು ರೈತರ ಪರವಾಗಿದೆಯೇ?

೨) ಲಿಂಗಾಧಾರಿತ ಅಸಮಾನತೆಯನ್ನು ಗುರುತಿಸುವ ಸೂಕ್ಷ್ಮ ಸಂವೇದನೆಯನ್ನು ಕುವೆಂಪು ಸಾಹಿತ್ಯ ಹೊಂದಿದೆಯೆ?

೩) ಕುವೆಂಪು ಸಾಹಿತ್ಯ ಎಷ್ಟರ ಮಟ್ಟಿಗೆ ತಳಸಮುದಾಯದವರ ತವಕ ತಲ್ಲಣ ,ಸಂಘರ್ಷ, ಬಂಡಾಯಗಳಿಗೆ ದನಿಯಾಗಿದೆ?

ಈ  ನೆಲೆಗಳಲ್ಲಿ ಕುವೆಂಪು ಸಾಹಿತ್ಯವನ್ನು ಅಧ್ಯಯನ ಮಾಡಬೇಕಾಗಿದೆ. ಕುವೆಂಪು ಅವರ ಮಹಿಳೆ, ದಲಿತ ಮತ್ತು ರೈತಪರ ಸಂವೇದನೆಗಳು ಯಾವುದೇ ಪಾಶ್ಚಾತ್ಯ ಸಿದ್ಧಾಂತಗಳಿಂದ ಪ್ರಭಾವಿತವಾಗಿ ಎರವಲಾಗಿ ಬಂದದ್ದಲ್ಲ. ಕಾರ್ಯಕಾರಣ ಸಂಬಂಧಗಳ ಹಿನ್ನೆಲೆಯಲ್ಲಿ ಈ ಸಂವೇದನೆಗಳು ಸಹಜವಾಗಿ ರೂಪುಗೊಂಡಿವೆ. ಹಾಗೆ ನೋಡಿದರೆ  ನವೋದಯದ ಸಾಹಿತ್ಯದ ಇನ್ನಿತರ ಮುಖ್ಯ ಲೇಖಕರಾದ ಕಾರಂತ, ಮಾಸ್ತಿ, ಬೇಂದ್ರೆ ಅವರ ಸಾಹಿತ್ಯ ಹೊರಗಿನ ಸಿದ್ಧಾಂತಗಳಿಂದ ಪ್ರಭಾವಿತವಾಗಿ ರಚನೆಯಾದುದಲ್ಲ. ಬದುಕನ್ನು ನೋಡುವ, ಗ್ರಹಿಸುವ,

ಕಟ್ಟುವ ವಿಶಾಲ ದೃಷ್ಟಿಕೋನ ಈ ಬಗೆಯ ಮನೋಧರ್ಮದ ಸಾಹಿತ್ಯ ರಚನೆಗೆ ಕಾರಣವಾಗಿದೆ. ಈ ಎಲ್ಲ ಗ್ರಹಿಕೆಗಳ ಹಿನ್ನೆಲೆಯಲ್ಲಿ ಕುವೆಂಪು ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಂವೇದನೆಯನ್ನು ಅಧ್ಯಯನ ಮಾಡಬೇಕಿದೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಗಮನಿಸಬೇಕಿರುವುದು ಸ್ತ್ರೀ ಸಂವೇದನೆ, ಸ್ತ್ರೀಪರ ಧೋರಣೆ ಎಂದರೆ ಐವತ್ತರ ದಶಕದಿಂದೀಚೆಗೆ ಬಂದ ಸ್ತ್ರೀ ಸಾಹಿತ್ಯ ಕ್ಲಾರಾಜಟ್ಕಿನ್, ರೂಸಾ ಲಕ್ಷಂಬರ್ಗ್ ಮೊದಲಾದವರು ಆರಂಭಿಸಿದ ಸ್ತ್ರೀ ಚಳುವಳಿ ಮಾದರಿಗಳ ಹಿನ್ನೆಲೆಯಲ್ಲಿ ರೂಪಿತವಾಗಿರುವ ಸ್ತ್ರೀ ಸಮಾನತೆ ಆಶಯದ ಸ್ತ್ರೀವಾದವಲ್ಲ. ಇದೊಂದು ಜೀವಪರ ಧೋರಣೆ, ಪ್ರಕೃತಿಯ ಎಲ್ಲ ಚೇತನ, ಅಚೇತನ ವ್ಯಾಪಾರಗಳ ಬಗ್ಗೆ ಕವಿ ತಳೆಯುವ ನಿಲುವು, ಮತ್ತು ಅವುಗಳೊಂದಿಗಿನ ಅನುಸಂಧಾನ, ಇದನ್ನೇ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ

"ಇಲ್ಲಿ ಯಾರೂ ಮುಖ್ಯರಲ್ಲ;

ಯಾರೂ ಅಮುಖ್ಯರಲ್ಲ;

ಯಾವುದೂ ಯಃಕಶ್ಚಿತವಲ್ಲ

ಇಲ್ಲಿ ಯಾವುದಕ್ಕೂ ಮೊದಲಿಲ್ಲ

ಯಾವುದಕ್ಕೂ ತುದಿಯಿಲ್ಲ

ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ

ಕೊನೆ ಮುಟ್ಟುವುದೂ ಇಲ್ಲ!

ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ!

ಇಲ್ಲಿ

ಎಲ್ಲಕ್ಕೂ ಇದೆ ಅರ್ಥ

ಯಾವುದೂ ಅಲ್ಲ ವ್ಯರ್ಥ

ನೀರಲ್ಲವೂ ತೀರ್ಥ!" ಎಂದು ಆರಂಭದಲ್ಲಿ ಹೇಳುವ ಈ ಸರ್ವಸಮಾನತೆಯ ತತ್ವ ಕುವೆಂಪು ಅವರಲ್ಲಿ ಸ್ವಲ್ಪ ಹೆಚ್ಚಾಗಿಯೇ ಸ್ತ್ರೀಪರವಾಗಿ ಕೆಲಸ ಮಾಡಿದೆ. ಈ ಗ್ರಹಿಕೆಯ ಸ್ತ್ರೀಸಂವೇದನೆ ಕುವೆಂಪು ಸಾಹಿತ್ಯದಲ್ಲಿ ಊರ್ಧ್ವಮುಖವಾಗಿ ಪಸರಿಸುತ್ತಾ, ಮಲೆನಾಡಿಗಷ್ಟೇ ಸೀಮಿತವಾಗದೆ ಬಯಲು ಸೀಮೆ ದಾಟಿ ಎಲ್ಲೆಡೆ ವ್ಯಾಪಿಸುತ್ತ

ಹೋಗುತ್ತದೆ. ಹೀಗಾಗಿ ಇಲ್ಲಿನ ಪಾತ್ರಗಳೆಲ್ಲ .ನಮ್ಮಲ್ಲೊಬ್ಬಳು ಎಂದುಕೊಂಡು ಸುಬ್ಬಮ್ಮ, ಚಿನ್ನಮ್ಮ, ಪೀಂಚಲು, ತಿಮ್ಮಿ, ಸೀತೆ, ಪುಟ್ಟಮ್ಮ, ನಾಗಿ, ಮಂಥರೆ, ಕೈಕೆ, ದೇವಮ್ಮ, ಅಕ್ಕಣಿ, ನಾಗಕ್ಕ, ನಾಗಮ್ಮ, ಹೇಮಾವತಿಯನ್ನು ಶೋಧಿಸಿ ನೋಡುವಂತಾಗುತ್ತದೆ.

ಸ್ವಾಮಿ ವಿವೇಕಾನಂದ, ಗಾಂಧೀಜಿ, ಟಾಲ್‌ಸ್ಟಾಯ್, ಮಹರ್ಷಿ ಅರವಿಂದ ಮೊದಲಾದವರ ಗಾಢಪ್ರಭಾವಕ್ಕೊಳಗಾಗಿರುವ ಕುವೆಂಪು ಸಾಹಿತ್ಯದಲ್ಲಿ ಮಾನವತಾವಾದ, ಸಮಾನತಾವಾರದ ಚಿಂತನೆಗಳು ಹರಳುಗಟ್ಟಿವೆ. ಯುಗಧರ್ಮಕ್ಕನುಗುಣವಾಗಿ ಮನೋಧರ್ಮವನ್ನು ರೂಪಿಸಿಕೊಂಡಿರುವ ಕವಿ ಪರಂಪರೆಯನ್ನು ಪ್ರಶ್ನಿಸುತ್ತಲೇ ಮುರಿದುಕಟ್ಟುವ ಕೆಲಸಕ್ಕೆ ಕೈಹಾಕಿದ್ದಾರೆ. ಈ ಮನೋಧರ್ಮವನ್ನೆ ಲಿಂಗಧಾರಿತ ವಿಶ್ಲೇಷಣೆ ಮತ್ತು ಸ್ತ್ರೀ ಸಂವೇದನೆಯಲ್ಲಿಕಾಣಬಹುದು.

ಕುವೆಂಪು ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಸ್ತ್ರೀ ಸಂವೇದನೆಯನ್ನು ಹೀಗೆ ವರ್ಗೀಕರಿಸಬಹುದು.

೧) ಲಿಂಗಧಾರಿತ ಸಂವೇದನೆ ಕುವೆಂಪು ಸಾಹಿತ್ಯದಲ್ಲಿ ತುಂಬಾ ಸೂಕ್ಷ್ಮವಾಗಿ ಅನಾವರಣಗೊಂಡಿದೆ.

೨) ಸ್ತ್ರೀ ಪಾತ್ರಗಳ ಉನ್ನತೀಕರಣ.

೩) ಪ್ರತಿಭಟನಾತ್ಮಕ ನೆಲೆಯಲ್ಲಿ ಸ್ತ್ರೀ ಮಾದರಿಗಳು.

೪) ವಾತ್ಸಲ್ಯಮಯಿ ನೆಲೆಯಲ್ಲಿ ಸ್ತ್ರೀ

೫) ದಾಂಪತ್ಯ ಬದುಕಿನಲ್ಲಿ ಸ್ತ್ರೀ

ಕುವೆಂಪು ಹೆಣ್ಣನ್ನು ಪರಾಧೀನೆ, ಅಸ್ತಿತ್ವಹೀನೆ ಎಂಬ ಮನೋಧರ್ಮದಲ್ಲಿ ನೋಡದೆ ಕೌಟುಂಬಿಕ ನೆಲೆಯಲ್ಲಿ, ಸಮಾಜದ ವಿವಿಧ ಹಂತಗಳಲ್ಲಿ ಅವಳು ಅನುಭವಿಸುವ ದೈಹಿಕ ಮತ್ತು ಮಾನಸಿಕ ಶೋಷಣೆಯನ್ನು ವಾಸ್ತವದ ನೆಲೆಯಲ್ಲಿ ಚಿತ್ರಿಸಿದ್ದಾರೆ. 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿಯಲ್ಲಿ ಸೀತೆ "ಹೂವಯ್ಯ ಭಾವವನ್ನು ಮದುವೆಯಾಗುತ್ತೇನೆ".ಎಂದು ಗೋಡೆಯ ಮೇಲೆ ಬರೆಯುವುದು ವೈಯಕ್ತಿಕ ನೆಲೆಯಿಂದ ಹೊರಟ ಅವಳೊಬ್ಬಳ ನಿರ್ಧಾರ, ಸೀತೆಯನ್ನು ಸಿಂಗಪ್ಪಗೌಡರ ಮಗ ಕೃಷ್ಣಪ್ಪನಿಗೆ ಕೊಡಬೇಕೆಂಬ ಆಕೆಯ ತಂದೆಯ ತೀರ್ಮಾನ ಸಾಮಾಜಿಕ ನೆಲೆಯದ್ದು. ವ್ಯಕ್ತಿ ನೆಲೆಯಿಂದ ಹೊರಟ ತೀರ್ಮಾನವನ್ನು ನಿರ್ದಾಕ್ಷಿಣ್ಯವಾಗಿ ಹೊಸಗಿಹಾಕುವ ಗಂಡುಧರ್ಮದ ದೌರ್ಜನ್ಯವನ್ನು ಕುವೆಂಪು ಅತಿ ಸೂಕ್ಷ್ಮವಾಗಿ ಕಂಡರಿಸಿದ್ದಾರೆ.

ಚಂದ್ರಯ್ಯಗೌಡರ ಮೂರನೆ ಪತ್ನಿಯಾಗಿ ಕಾನೂರಿಗೆ ಕಾಲಿಡುವ ನೆಲ್ಲುಹಳ್ಳಿಯ ಸುಬ್ಬಮ್ಮನ ಮೇಲಾಗುವ ದೌರ್ಜನ್ಯ ಮತ್ತೊಂದು ಸ್ವರೂಪದ್ದು, ಬಡತನವನ್ನೇ ಹಾಸಿಹೊದ್ದಿದ್ದ ಸುಬ್ಬಮ್ಮನ ಪೋಷಕರಿಗೆ ತೆರತೆತ್ತು ಮದುವೆಯಾದ ಚಂದ್ರಯ್ಯಗೌಡರು ಅವಳಲ್ಲಿ ಪುಟಿಯುತ್ತಿದ್ದ ತಾರುಣ್ಯದ ಕಾರಣ ಒಂದೆಡೆಯಾದರೆ, ಹೂವಯ್ಯನ

ಇರುವಿಕೆಯಿಂದ ಬದಲಾದ ಆಕೆಯ ಸ್ವಭಾವದಿಂದಲೂ ಸಂಶಯಪಟ್ಟು ದೌರ್ಜನ್ಯವೆಸಗುತ್ತಾರೆ. ಕೆಳಕಾನೂರಿಗೆ ಪಾರಾಗಿ, ಅಲ್ಲಿಂದ ನೆಲ್ಲಳ್ಳಿಗೆ ಹೋಗಿ ಅಲ್ಲಿಯೂ ತಿರಸ್ಕಾರಕ್ಕೆ ಗುರಿಯಾಗುತ್ತಾಳೆ. ಕಾಯಿಲೆಯಿಂದ ಬದಲಾದ ಚಂದ್ರಯ್ಯಗೌಡರ ಸೇವೆ ಮಾಡಿ, ಗೌಡರ ಮರಣಾನಂತರ ಅಪಹಾಸ್ಯ ಮಾಡಿದವರೆ ಬೆರಗಾಗುವಂತೆ ಕಾನೂರಿನ ಹೆಗ್ಗಡಿತಿಯಾಗಿ ಅವಳ ಕರ್ತೃತ್ವಶಕ್ತಿ ಅನಾವರಣಗೊಳ್ಳುತ್ತದೆ. ಕಾನೂರು ಹೆಗ್ಗಡತಿಯಾಗಿ ನಿಯಂತ್ರಕ ಶಕ್ತಿಯಾಗಿದ್ದ ಸುಬ್ಬಮ್ಮನನ್ನು ವ್ಯವಸ್ಥೆ ಸೇರೆಗಾರ ರಂಗಪ್ಪಸೆಟ್ಟಿಯ ಮೂಲಕ ನಿಯಂತ್ರಿಸುತ್ತದೆ. ಬಡತನ, ಅಪಮಾನ, ತಾರುಣ್ಯವೆಲ್ಲವನ್ನು ಮೀರಿ ಕಾನೂರು ಹೆಗ್ಗಡತಿಯಾಗುವ ಮೂಲಕ ಅದ್ಭುತವಾಗಿ ಪುಟಿದೆದ್ದ ಸುಬ್ಬಮ್ಮ ಚಂದ್ರಯ್ಯಗೌಡ, ಗಂಗೆ, ಸೇರೆಗಾರರಿಂದ ಸಮನಾಂತರವಾಗಿ ಶೋಷಣೆ ಹೊಂದಿ ದುರಂತಕ್ಕೀಡಾಗುತ್ತಾಳೆ.

'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಅಕ್ಕಣಿ, ದೇಯಿ, ಕಾವೇರಿ, ಜ್ಯೋತಿರ್ಮಣಿ ಮೇಲೆ ನಡೆಯುವ ದೌರ್ಜನ್ಯ ಮತ್ತೊಂದು ಸ್ವರೂಪದ್ದು. ಕೋಣೂರು ರಂಗಪ್ಪಗೌಡರ ಒಕ್ಕಲಾಗಿದ್ದ ಅಕ್ಕಣಿ ದೇಯಿಯ ಗಂಡ ಚಿಂಕ್ರನಿಂದ ಮತ್ತು ರಂಗಪ್ಪಗೌಡರಿಂದ ಲೈಂಗಿಕವಾಗಿ ಶೋಷಣೆಗೀಡಾಗುತ್ತಾಳೆ. ತನ್ನದೆ ಸಮುದಾಯಕ್ಕೆ ಸೇರಿದ ಚಿಂಕ್ರನಿಂದ್ರಾಗುವ ಲೈಂಗಿಕ ಶೋಷಣೆ ತಪ್ಪಿಸಿಕೊಳ್ಳಲು ಆರ್ಥಿಕವಾಗಿ ಸಬಲರಾಗಿದ್ದ, ಒಡೆಯರಾಗಿದ್ದ ರಂಗಪ್ಪಗೌಡರನ್ನಾಶ್ರಯಿಸಿ ಬದುಕಬೇಕಾಗುತ್ತದೆ. ತಳಸಮುದಾಯಕ್ಕೆ ಸೇರಿದ ದಿಕ್ಕಿಲ್ಲದ ಹೆಣ್ಣು ಮಕ್ಕಳ ಆರ್ಥಿಕ ನೆಲೆ ಸದಾ ಅಭದ್ರವಾಗಿರುವುದರಿಂದ ಮೇಲ್ವರ್ಗದವರಿಂದ ಸುಲಭವಾಗಿ ಲೈಂಗಿಕ ಶೋಷಣೆಗೊಳಗಾಗಬಹುದೆಂದುದಕ್ಕೆ ಅಕ್ಕಣಿ ನಿದರ್ಶನವಾಗಿಬಿಡುತ್ತಾಳೆ. ಇನ್ನು ಮೇಲ್ವರ್ಗದ ಕಲ್ಲೂರಿನ ಮಂಜಭಟ್ಟರ ಸೊಸೆ, ಗಂಡ ಅತ್ತೆ ಮಾವನಿಂದಲೆ ಶೋಷಣೆಗೀಡಾಗುತ್ತಾಳೆ. ಹಳೆ ಮನೆ ಸುಬ್ಬಣ್ಣ ಹೆಗ್ಗಡೆಯವರ ಸೊಸೆ ರಂಗಮ್ಮ ಮೈದುನ ತಿಮ್ಮಪ್ಪ ಹೆಗ್ಗಡೆಯಿಂದ ಶೋಷಣೆಗೊಳಗಾಗುತ್ತಾಳೆ. ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ದೇವಯ್ಯಗೌಡರನ್ನು ಕ್ರೈಸ್ತ ಮತಕ್ಕೆ ಮತಾಂತರ ಮಾಡಿಸಲು, ಆ ಮೂಲಕ ಮಲೆನಾಡಿನಲ್ಲಿ ಕ್ರೈಸ್ತಧರ್ಮ ಪ್ರಚಾರ ಮಾಡಲು ತನ್ನ ಮಗಳು ಜ್ಯೋತಿರ್ಮಣಿಯನ್ನು ದೇವಯ್ಯಗೌಡರಿಗೆ ಒಪ್ಪಿಸುತ್ತಾನೆ. ಗರ್ಭಿಣಿ ದೇಯಿ ಗಂಡ ಚೀಂಂಕ್ರನಿಂದಲೇ ನಿರಂತರವಾಗಿ ದೌರ್ಜನ್ಯಕ್ಕೀಡಾಗಿ ಸಾವನ್ನಪ್ಪುತ್ತಾಳೆ.

ಶೋಷಿತರೆ ಸ್ಥಾಪಿತ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಂಡು ಪುರುಷರಂತೆಯೇ ಮಾನಸಿಕವಾಗಿ ಆರ್ಥಿಕವಾಗಿ ದುರ್ಬಲರಾಗಿರುವುದನ್ನು ಶೋಷಿಸುವುದನ್ನು ಕಾನೂರು ಹೆಗ್ಗಡತಿಯು ಸೇರೆಗಾರ ರಂಗಪ್ಪಸೆಟ್ಟರ ಪ್ರೇಯಸಿ ಗಂಗೆ ಸೇರೆಗಾರರಿಂದ ಗರ್ಭಿಣಿಯಾಗಿರುವ ವಿಧವೆ ಸುಬ್ಬಮ್ಮನನ್ನು ಶೋಷಿಸಿದರೆ, 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ವಿಧವೆ ಬಾವಿಕೊಪ್ಪದ ನಾಗತ್ತೆ ತನ್ನ ಸೊಸೆ ವಿಧವೆಯಾಗಿದ್ದ ನಾಗಕ್ಕನ ವ್ಯಕ್ತಿತ್ವವನ್ನು ನಿರಾಕರಿಸಿ ಅವಳನ್ನು ಮಾರಾಟದ ಸರಕೆಂಬಂತೆ ಪರಿಗಣಿಸಿ ಮೂರನೆ ಬಾರಿಗೆ ಕೂಡಿಕೆ ಮಾಡಲು

ಊರಿಂದೂರಿಗೆ ಅಲೆದಾಡುತ್ತ ಎಲ್ಲರಿಂದಲೂ ನಗೆಪಾಟಲಿಗೀಡಾಗುವಂತೆ ನಡೆದುಕೊಳ್ಳುತ್ತಾಳೆ. ಅಕ್ಷರಸ್ಥಳಾಗಿದ್ದರೂ ತಂದೆಯ ಮತಾಂತರ ಕಾರ್ಯಕ್ಕೆ ದಾಳವಾಗುವ ಮೂಲಕ ಜ್ಯೋತಿರ್ಮಣಿ ಅರಿವಿದ್ದು ಶೋಷಣೆಗೀಡಾಗುತ್ತಾಳೆ. ಆರ್ಥಿಕ, ದೈಹಿಕ, ಮಾನಸಿಕವಾಗಿ ದುರ್ಬಲರಾಗಿರುವ ಹೆಣ್ಣು ಮಕ್ಕಳು ಜಾತಿವರ್ಗಗಳನ್ನು ಮೀರಿ ಪುರುಷರಿಂದ ಮತ್ತು ಕುಟಿಲ ಬುದ್ಧಿಯ ಮಹಿಳೆಯರಿಂದ ಶೋಷಣೆಗೀಡಾಗುತ್ತಾರೆಂಬುದನ್ನು ಕುವೆಂಪು ತುಂಬಾ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಕಾದಂಬರಿಗಳಂತೆಯೇ ಕವನಗಳಲ್ಲಿ ಕೂಡ ಹೆಣ್ಣಿನ ಶೋಷಣೆಯ ಸ್ವರೂಪವನ್ನು 'ಸತಿ' ಮತ್ತು 'ಬಾಲವಿಧವೆ' ಕವನಗಳಲ್ಲಿ ಕಾಣಬಹುದು.

ಎಂಟು ವರುಷದ ಬಾಲೆ, ಲೋಕದ ಭಾವಗಳನರಿಯದಿಹ ಮುಗ್ದೆಗೆ

ಸಾವು ಬಾಳುಗಳೆಂಬ ಭೇದವ ತಿಳಿಯದಂಗನೆಗೆ

ಇನಿಯನಂತಕನೂರ ಸೇರಲು ಚಿತೆಯನೇರುವ ಕಾಲ ಬಂದಿದೆ....

ಮಾವ ಬಂದನು, ಕರೆದು ತಾರೆಯನೆತ್ತಿಕೊಂಡನು; ಕಂಬನಿಯ ಕರೆ

ಯುತ್ತ ನುಡಿದನು; ತಾರೆ ಗಂಡನ ಕೂಡಿ ನೀ ಹೋಗು !

ಹದಿಬದೆಗೆ ಸೊಗವಹುದು ಮೇಲಿನ ಲೋಕದಲಿ ಹೆದರದಿರು ಮಗಳೆ !"

ಮುಗ್ಧ ಬಾಲಕಿಗೆ ಧರ್ಮ ಶಾಸ್ತ್ರದ ನೀತಿ ಬೋಧಿಸಿ ಚಿತೆಗೆ ತಳ್ಳುವ ಅಮಾನವೀಯ ಕ್ರೌರ್ಯವನ್ನು 'ಹೊನ್ನಹೊತ್ತಾರೆ' 'ಸತಿ' ಕವನದಲ್ಲಿ ಚಿತ್ರಿಸಿದ್ದಾರೆ.

ಮನುಜಲೋಕವೆ ನರಕ, ಬೇರೆ ನರಕವದಲ್ಲಿ
ಆ ವಿಧವೆಗೆ
ಪತಿಯ ಲೋಕಪಿ ನಾಶ, ಬೇರೆ ನಾಶವಾದಲ್ಲಿ

ಆ ಬಾಲೆಗೆ

ಧರ್ಮಶಾಸ್ತ್ರಜ್ಞರೇ ಬನ್ನಿ ಧರ್ಮವ ತೋರಿ !

ನೀತಿಯಲಿ ಪಂಡಿತರೆ ಬನ್ನಿ ದಾರಿಯ ತೊರಿ !

ಧಾರೆಯನು ಎರೆದವನೆ, ಜೋಯಿಸನೆ, ಬಾ ಈಗ

ಕರೆ ನಿನ್ನ ಸಾಕ್ಷಿಗಳ ! ಅಪರಾಧಿ ಯಾರು ?

ಇದನೆಲ್ಲ ಸರಿಯೆಂದು ಹೊಗಳುವ ಸಮಾಜವೇ
ಎಲ್ಲಿ ಗೊರಕೆಯ ಹೊಡೆವೆ? ಬಾ ಬೇಗ ಇಲ್ಲಿ !
ಇಲ್ಲಿ ನ್ಯಾಯಾಸ್ಥಾನ ! ಇಲ್ಲಿ ಧರ್ಮವ ಹೇಳು !
ಮರದ ಕರಿನೆರಳಲ್ಲಿ ಕೊರಲ ಕಣ್ಣಿಯನಪ್ಪಿ
ನೇತಾಡುತ್ತಿರುವಳೈ ಬಾಲವಿಧವೆ !! (ಬಾಲವಿಧವೆ)

ಕುವೆಂಪು ಸ್ತ್ರೀಯನ್ನು ಕೇವಲ ಗೌರವದ ನೆಲೆಯಲ್ಲಿಟ್ಟು ನೋಡದೆ ಕೌಟುಂಬಿಕ ನೆಲೆಯಿಂದ ಸಮಾಜದ ವಿವಿಧ ಹಂತಗಳಲ್ಲಿ ಅವಳು ಅನುಭವಿಸುತ ದೈಹಿಕ, ಮಾನಸಿಕ ಯಾತನೆಗಳನ್ನು ಕವನದ ವಸ್ತುವನ್ನಾಗಿಸಿಕೊಳ್ಳುವ ಮೂಲಕ ಜೀವ ಪರ ,ಮನುಷ್ಯಪರವಾದ ಎಂದಿನ ತಮ್ಮ ನಿಲುವಿಗೆ ಬದ್ಧರಾಗಿದ್ದಾರೆ. ಧರ್ಮಶಾಸ್ತ್ರ, ಸಂಪ್ರದಾಯ, ಕುರುಡುನಂಬಿಕೆ, ಯಜಮಾನಿಕೆ ಎಂಬ ಗಂಡು ದರ್ಪಗಳು ಹೇಗೆ ಹೆಣ್ಣನ್ನು, ಹೆಣ್ಣಿನ ಸ್ಥಾನವನ್ನು ಗೌಣವಾಗಿಸಿ ಹಿಂಡುತ್ತವೆ. ದೇವರು, ಧರ್ಮ, ನಂಬಿಕೆಗಳ ಹೆಸರಿನಲ್ಲಿ ಹೆಣ್ಣು ನಲುಗಿ ಬದುಕಿನಿಂದಲೇ ಮರೆಯಾಗುತ್ತಿರುವ ಸುಡುವಾಸ್ತವದ ಅನಾವರಣ 'ಸತಿ' ಮತ್ತು 'ಬಾಲವಿಧವೆ' ಕವನಗಳಲ್ಲಿದೆ.

ಎರಡನೆಯದಾಗಿ ಕುವೆಂಪು ಸಾಹಿತ್ಯವನ್ನು ಸ್ತ್ರೀಸಂವೇದನೆಯ ದೃಷ್ಟಿಯಿಂದ ಇಡಿಯಾಗಿ ಅವಲೋಕಿಸಿದಾಗ ಸ್ತ್ರೀ ಪಾತ್ರಗಳ ಉನ್ನತೀಕರಣವಾಗಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. 'ಶ್ರೀರಾಮಾಯಣದರ್ಶನಂ' ಕಾವ್ಯದ ಮಂಥರೆ, ಊರ್ಮಿಳೆ, ಕೈಕೆ, ಅನಲೆ, ಮಂಡೋದರಿ, 'ಮನೆಮನೆಯತಪಸ್ವಿನಿ'ಯ ಗೃಹಿಣಿ, 'ಚಿತ್ರಾಂಗದ' ಕಾವ್ಯದ ಚಿತ್ರಾಂಗದೆ, 'ಸ್ವರ್ಗದ್ವಾರದಿ ಯಕ್ಷಪ್ರಶ್ನೆ'ಯ ಕವಿಪತ್ನಿ ಹೇಮಾವತಿ, ರಂಗಮ್ಮ, ತಿಮ್ಮಿ, ಹಳೆಪೈಕದ ಯಂಕಿ, ಬೆಟ್ಟಳ್ಳಿಯ ದೇವಮ್ಮ, ಕೋಣೂರಿನ ದಾನಮ್ಮ ಹೆಗ್ಗಡ್ತಿ, 'ಕಾನೂರು ಹೆಗ್ಗಡತಿ'ಯ ಸೀತೆ, ನಾಗಮ್ಮ 'ಸನ್ಯಾಸಿ' ಕತೆಯ ಇಂದಿರೆ ಮೊದಲಾದವರೆಲ್ಲ ಸಂದರ್ಭವಶದಿಂದ ಉನ್ನತೀಕರಣಗೊಂಡ ಅನುಕರಣೀಯರೆ ಆಗಿದ್ದಾರೆ.

ಮೂಲ ರಾಮಾಯಣದಲ್ಲಿ ಪತತಿಳಾಗಿ, ರಾಮನ ವನವಾಸಕ್ಕೆ ಕಾರಣೀಭೂತಳಾಗಿ ಎಲ್ಲರ ತಿರಸ್ಕಾರಕ್ಕೆ ಗುರಿಯಾದ ಮಂಥರೆ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ವಿಧಿಯ ಕೈಯ ಕೂರಸಿ, ಹೊರಗಣ್ಣಿಗೆ ವಿಕಾರವಾಗಿ ಕಂಡರೂ ದೈವಶಕ್ತಿಯ ಕೃಪಾಸಿಂಧುವಾಗಿ ಸ್ತ್ರೀ ಜನ್ಮವೆತ್ತಿದ ಹೆಣ್ಣಾಗಿ ವಿಧಿಯ ಹಸ್ತದ ಸೂತ್ರದ ಬೊಂಬೆಯಾಗುತ್ತಾಳೆ.

ನೆಯ್ದಾಳುತಿದೆ ಜಗವನೊಂದತಿ ವಿರಾಣ್ ಮನಂ
ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ

ನೀಡಿ, ಮಂಥರೆ, ಸೀತೆರಾಮರಾವಣರೆಲ್ಲರಂ

ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?"

ಮಂಥರೆ ಭರತನ ಮೇಲಿನ ಅಪಾರ ವಾತ್ಸಲ್ಯದಿಂದ ರಾಮನ ವನವಾಸಕ್ಕೆ ಕಾರಣಕರ್ತಳಾಗಿರದೆ ವಿಧಿಯ ಕೈಯ ಸೂತ್ರದ ಬೊಂಬೆಯಾಗಿದ್ದಾಳೆ. ತನ್ನ ದೇಹದ ಕುರೂಪಕ್ಕೆ, ಕುಬ್ಜತನಕ್ಕೆ ಹೇಗೆ ಕಾರಣಳಲ್ಲವೋ ಹಾಗೆಯೇ ರಾಮಾಯಣದ ದುರ್ಘಟನೆಗಳಿಗೆ ಮಂಥರೆ ಕಾರಣಳೇ ಅಲ್ಲ. ಮಾನವ ಸಹಜ ಗುಣಗಳನ್ನೊಂದಿರುವ ಆಕೆ ಎಲ್ಲರ ಪ್ರೀತಿ ಕರುಣೆಗೆ ಪಾತ್ರಳಾಗುವ ಉದಾತ್ತ ಸ್ತ್ರೀಯಾಗಿ ಕಾವ್ಯದಲ್ಲಿ ಚಿತ್ರಿತಳಾಗಿದ್ದಾಳೆ.

ಮಂಥರೆಯಂತೆ ತಿರಸ್ಕಾರಕ್ಕೆ, ಲೋಕನಿಂದೆಗೆ ಗುರಿಯಾದವರಲ್ಲಿ ದಶರಥನ ಮೂರನೆ ಪತ್ನಿ ಲೋಕೋತ್ತರ ಸುಂದರಿ, ಭರತಜನನಿ ಕೈಕೆಯೂ ಒಬ್ಬಳು ಮಂಥರೆಯ ಮಾತು ಕೇಳಿ ಭರತನ ಹಿತಾಸಕ್ತಿ ಕಾಪಾಡಲು ಹೋಗಿ ದಶರಥನ ಸಾವಿಗೆ ಕಾರಣೀಭೂತಳಾದ ಕೈಕೆಗೆ "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ ವ್ಯೂಹರಚನೆಯಲಿ" ಎಂದು ಕೈಕೆಯ ಮೇಲಿನ ಅಪವಾದ ತೊಡೆದು ಜೀವನ ಪರಿವರ್ತನೆಗೆ ಅವಕಾಶ ಕಲ್ಪಿಸಿ ಎತ್ತರದ ಸ್ಥಾನಕ್ಕೇರಿಸಿದ್ದಾರೆ.

ಮೂಲರಾಮಾಯಣದಲ್ಲಿ ನಾಮಮಾತ್ರದಿಂದ ಗೋಚರಳಾಗಿ ಅನಾಮಧೇಯಳಾಗಿದ್ದ ಊರ್ಮಿಳೆ ತ್ಯಾಗಮಯಿಯಾಗಿದ್ದಾಳೆ, ತಪಶ್ಯಕ್ತಿಯಾಗಿ ರಾಮಾಯಣದುದ್ದಕ್ಕೂ ಕಾಯುವ ಶಕ್ತಿಯಾಗಿ ಪ್ರವಹಿಸಿದ್ದಾಳೆ. ಊರ್ಮಿಳೆ ಕೇವಲ ಹೆಣ್ಣಲ್ಲ ತಪಸ್ವಿನಿ, ಕಲ್ದವಸಿ, ಸ್ಥಿತಪ್ರಜ್ಞೆ, ಮೌನದ ವಿಶಿಷ್ಟ ಶಕ್ತಿಯನ್ನು ಆವಾಹನೆ ಮಾಡಿಕೊಂಡು ತಪಶ್ಯಕ್ತಿಯಾಗಿ ರಾಮಾಯಣದುದ್ದಕ್ಕೂ ಕಾಯುವ ಶಕ್ತಿಯಾಗಿ ಪ್ರವಹಿಸಿದ್ದಾಳೆ.ಈ ಕಾವ್ಯದಲ್ಲಿ ಸೀತೆ ಜಂಗಮಶಕ್ತಿಯಾದರೆ, ಊರ್ಮಿಳೆ ಸ್ಥಾವರಶಕ್ತಿ. ಅನಲೆ, ಮಂಡೋದರಿ, ಚಂದ್ರನಖಿ ಮೊದಲಾದ ಸ್ತ್ರೀಯರೆಲ್ಲ ರಾಮಾಯಣದ ದುರ್ಘಟನೆಗಳ ಅಗ್ನಿ ಪರೀಕ್ಷೆಯಲ್ಲಿ ಬೆಂದು ಪರಿಶುದ್ಧ ಹೃದಯದವರಾಗಿ ಕಾಳಿಕೆಯನ್ನು ತೊಳೆದು ಪ್ರಭೆ ಬೀರುವ ಚೇತನಗಳಾಗಿ ಬೆಳಗಿದ್ದಾರೆ.

ಕುವೆಂಪು ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಸ್ತ್ರೀ ಸಾಮಾನ್ಯಳೇ ಆಗಿದ್ದರೂ ಮಾನವೀಯ ಮೌಲ್ಯಗಳಿಗಾಗಿ ತುಡಿಯುತ್ತಾ, ಪುರಾಣದ ,ಪರಂಪರೆಯ, ಸಂಪ್ರದಾಯಯದ ಮಾದರಿಗಳನ್ನು, ತಡೆಗೋಡೆಗಳನ್ನು ದಾಟಿ ಮುನ್ನಡೆಯುವಂಥವರು. ಒಡೆಯರೆದುರು ನಿಲ್ಲಲು, ಮಾತನಾಡಲು ಹೆದರುತ್ತಿದ್ದ ಸೇಸಿ ಮಗನ ಕಟ್ಟುಗಳನ್ನು ಬಿಚ್ಚಲು ಆಜ್ಞೆ ಮಾಡುವ ಸಂದರ್ಭ ಹೆಣ್ಣಿನ ಧೀ ಶಕ್ತಿಗೆ ಸಾಕ್ಷಿಯಾದರೆ, ತಾನಿಷ್ಟಪಟ್ಟವನನ್ನು ಮದುವೆಯಾಗಲು ಯಾವುದೇ ರೀತಿಯ ಕಷ್ಟ ಎದುರಿಸಿ ಯಶಸ್ವಿಯಾದ ಚಿನ್ನಮ್ಮ, ಹುಲಿಕಲ್ಲು ಗುಡ್ಡದ ನೆತ್ತಿಯ ಮೇಲೆ ತಿಮ್ಮಿಗಾಗುವ ಅದ್ಭುತ ಅನುಭವದ ಕಾಣ್ಕೆ, ಆಕೆಯ ಸಂವೇದನೆ. ದೌರ್ಜನ್ಯದ ವಿರುದ್ಧ ಹೊಡ್ಡಮ್ಮ ಹೆಗ್ಗಡತಿಯು ಪ್ರತಿಕ್ರಿಯಿಸುವ

ಮೌನದ ಪ್ರತಿಭಟನೆಗಳಿಂದಾಗಿ ಕುವೆಂಪು ಸಾಹಿತ್ಯದ ಸ್ತ್ರೀಯರು ಜೀವ ನದಿಗಳಾಗಿ, ಸ್ತ್ರೀ ಮಾದರಿಗಳಾಗಿ ಚಿತ್ರಿತರಾಗಿದ್ದಾರೆ.

ಗ್ರಂಥ ಋಣ:

ಗ್ರಂಥ ಋಣ


೧. ಜಿ.ಎಸ್.ಶಿವರುದ್ರಪ್ಪ: ಕುವೆಂಪು ಪುನರಾವಲೋಕನ, ಅಂಕಿತ, ಬೆಂಗಳೂರು (೨೦೦೫)

೨. ಪ್ರೊ.ಎಲ್.ಎಸ್.ಶೇಷಗಿರಿ ರಾವ್:ಕುವೆಂಪು ಸಾಹಿತ್ಯ ಜಗತ್ತಿನಲ್ಲಿ; ಸಪ್ನ ಬುಕ್ ಹೌಸ್,ಬೆಂಗಳೂರು.(೨೦೦೮)

೩. ನರಹಳ್ಳಿ ಬಾಲಸುಬ್ರಹ್ಮಣ್ಯ: ಕುವೆಂಪು ಕಥನ ಕೌತುಕ,  ಅಭಿನಯ, ಬೆಂಗಳೂರು. (೨೦೧೬)

೪. ಡಿ.ಎಸ್.ನಾಗಭೂಷಣ: ಅನೇಕ–ಧರ್ಮ,ಜಾತಿ ಕೋಮುವಾದ:ಕುವೆಂಪುಚಿಂತನಗಳು. ಲೋಹಿಯಾ ಪ್ರಕಾಶನ, ಬಳ್ಳಾರಿ

೫. ಸಂ.ಪ್ರೊ.ಅರವಿಂದ ಮಾಲಗತ್ತಿ: ಕುವೆಂಪು ಕೃತಿ ವಿಮರ್ಶೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ ಮೈಸೂರು.(೨೦೦೬)